**ದಿನಾಂಕಃ-22.02.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ-7 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಡಿಎಂ ರವರಿಂದ**

ನನ್ನ ತಂದೆ **2009** ರಲ್ಲಿ ತೀರಿಕೊಂಡಿರುತ್ತಾರೆ. ದಿನಾಂಕ ನನಗೆ ಗೊತ್ತಿಲ್ಲ. ನನ್ನ ತಾತನ ಹೆಸರು ಸಂಗಪ್ಪ. ಅವರಿಗೆ **4** ಜನ ಮಕ್ಕಳು, ಅವರುಗಳೆಂದರೆ ಗಂಗಪ್ಪ ಮತ್ತು ದೊಡ್ಡಬಸಪ್ಪ, ಹೆಣ್ಣು ಮಕ್ಕಳ ಹೆಸರು ಗೊತ್ತಿಲ್ಲ. ನನ್ನ ತಂದೆ ವಿಭಾಗ ಮಾಡಿಕೊಂಡಿದ್ದರು ಎಂದು ಹೇಳಲಾದ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ.**5** ರಲ್ಲಿ ಸಂಗಪ್ಪನವರಿಗೆ ಇಬ್ಬರು ಮಕ್ಕಳು ಎಂದು ತಿಳಿಸಿದ್ದು, **4** ಜನ ಎಂದು ತಿಳಿಸಿಲ್ಲ ಎಂದರೆ ಸಾಕ್ಷಿಯು ಹೆಣ್ಣು ಮಕ್ಕಳನ್ನು ದಾವೆಯಲ್ಲಿ ಸೇರಿಸಿಲ್ಲ, ಯಾರು ವಿಭಾಗ ಮಾಡಿಕೊಂಡಿದ್ದಾರೋ ಅವರನ್ನು ದಾವೆಯಲ್ಲಿ ಸೇರಿಸಿದ್ದೇನೆ ಎಂದು ನುಡಿಯುತ್ತಾರೆ.

ವಿಭಾಗದಿಂದ ನನ್ನ ತಂದೆಗೆ ಬೇರೆ-ಬೇರೆ ಸರ್ವೆ ನಂಬರ್ನಲ್ಲಿ **5** ಎಕರೆ ಜಮೀನು ಬಂದಿರುತ್ತದೆ. ಅದರ ಸರ್ವೆ ನಂಬರ್ಗಳು ನನಗೆ ಗೊತ್ತಿಲ್ಲ. ನನ್ನ ತಂದೆಗೆ ವಿಭಾಗದಿಂದ ಬಂದ ಎಲ್ಲಾ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ವಿಭಾಗ ಪತ್ರ ನನ್ನ ಬಳಿ ಇಲ್ಲ. ನಾವು **6** ಜನ ಅಕ್ಕ-ತಂಗಿಯರು. ನಾನು **2005** ರಲ್ಲಿ ಮದುವೆಯಾಗಿದ್ದೇನೆ.

ನನ್ನ ಮದುವೆಯ ಸಲುವಾಗಿ ನನ್ನ ತಂದೆ ಹಾಗೂ ನನ್ನ ಉಳಿದ **5** ಜನ ಅಕ್ಕ-ತಂಗಿಯರು ದಿನಾಂಕಃ-**26.11.2007** ರಲ್ಲಿ ಗುರುಚನ್ನಬಸಪ್ಪನವರಿಗೆ ನೊಂದಾಯಿತ ಕ್ರಯ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿರುವುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ, ಸಾಕ್ಷಿಯು ಮುಂದುವರಿದು ಮಾರಾಟ ಮಾಡಿದ್ದಾರೆ ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಾರಾಟದ ನಂತರ ಎಂ ಆರ್ **27/07-08** ರ ಪ್ರಕಾರ ಗುರುಚನ್ನಬಸಪ್ಪನವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ

ಸರಿಯಲ್ಲ. ಖರೀದಿ ಪಡೆದ ದಿನದಿಂದ ಗುರುಚನ್ನಬಸಪ್ಪನವರೇ ದಾವಾ ಆಸ್ತಿಯ ಸ್ವಾಧೀನವನ್ನು ಹೊಂದಿದ್ದಾರೆ ಎಂದರೆ ಸಾಕ್ಷಿಯು ನಾವು ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. 7 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಕೇಸು ದಾಖಲೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಸೇರಿದ ಉಳಿದ ಆಸಿತಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲದೇ ಕಾರಣ ದಾವೆಯೂ ಊರ್ಜಿತವಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಮಾರಾಟ ಆದ ದಿನವೇ ಸೇರಿಸಿರುತ್ತೇನೆ ಎಂದು ನುಡಿಯುತ್ತಾರೆ. ವಿಭಾಗ ಪತ್ರ ಹಾಜರುಮಾಡಿಲ್ಲದಿದ್ದರೂ ಹಾಜರುಮಾಡಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ನನ್ನ ತಂದೆಯ ಮನೆಯಲ್ಲಿ ಇದ್ದಾರೆಂದರೆ ಸರಿ. ನನ್ನ ತಂದೆ ಅವರ ಮನೆಯಲ್ಲಿಯೇ ಮರಣ ಹೊಂದಿರುತಾರೆ ಎಂದರೆ ಸರಿ. ನನ್ನ ತಂದೆಗೆ ಸೇರಿದ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ನನ್ನ ತಾಯಿ ಇದ್ದರಿಂದ ಸೇರಿಸಿಲ್ಲ. ಆಸ್ತಿಗಳು ನನ್ನ ತಾತ ಸಂಗಪ್ಪನವರ ಹೆಸರಿನಲ್ಲಿತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಮಾಡಿಲ್ಲ ಎಂದರೆ ಸಾಕ್ಷಿಯು ಮಾರಾಟವಾದ ಸ್ವತ್ತನ್ನು ಮಾತ್ರವೇ ಸೇರಿಸಿದ್ದು ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಮಾತ್ರ ಹಾಜರು ಮಾಡಿರುತ್ತೇನೆ. ನನಗೆ ದಾವಾ ಆಸ್ತಿಯಲ್ಲಿ ಭಾಗ ತೆಗೆದುಕೊಳ್ಳುವ ಯಾವುದೇ ಉದ್ದೇಶ ಇಲ್ಲದಿದ್ದರೂ ಸಹ 7 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಾರಾಟದ ಮಾತುಕತೆಯಲ್ಲಿ ನಾನು ಮತ್ತು ನನ್ನ ಗಂಡ ಇದ್ದೇವು ಎಂದರೆ ಸರಿಯಲ್ಲ.

ಪಾಟೀ ಸವಾಲುಃ-1 ರಿಂದ 5 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ. ಬಿಸಿ ರವರಿಂದ

ಉಳಿದ ಸ್ವತ್ತಿನಲ್ಲಿ ನಾನು ಭಾಗ ತೆಗೆದುಕೊಂಡಿರುವುದಿಲ್ಲ. ನನ್ನ ತಂದೆ ಹಾಗೂ

ನನ್ನ ಅಕ್ಕ-ತಂಗಿಯರು ದಾವಾ ಆಸ್ತಿಯನ್ನು 2007 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನನ್ನ ಮದುವೆಯಾಗಿ 1 ವರ್ಷವಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ನಾನು ನನ್ನ ಗಂಡನ ಮನೆಯಲ್ಲಿದ್ದೆ ಎಂದರೆ ಸರಿ. ನನ್ನ ಅಕ್ಕ-ತಂಗಿಯರು ದಾಖಲೆಗೆ ಸಹಿ ಮಾಡಲು ಕರೆದರು ಎಂದರೆ ಸಾಕ್ಷಿಯು ನನ್ನನ್ನೂ ಯಾರು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ದಾವೆ ಹೂಡುವುದಿಲ್ಲ ಎಂದು ಹೇಳಿದ ಕಾರಣಕ್ಕೆ ನನ್ನ ಅಕ್ಕ-ತಂಗಿಯರು ದಾವಾ ಆಸ್ತಿಯನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬೇರೆ ಆಸ್ತಿಗಳನ್ನು ದಾವೆಗೆ ಸೇರಿಸದೇ ದಾವಾ ಆಸ್ತಿ ಮಾತ್ರ ದಾವೆಗೆ ಸೇರಿಸಿದ್ದೇನ ಎಂದರೆ ಬೇರೆ ಯಾವುದೇ ಆಸ್ತಿ ಇಲ್ಲ, 2 ಎಕರೆ ಜಮೀನನ್ನು ನನ್ನ ತಾಯಿಗೆ ಬರೆದಿರುತ್ತಾರೆ. ಬೇರೆ ಆಸ್ತಿಗಳನ್ನು ಬಿಟ್ಟು ಕೇಸವಲ ದಾವಾ ಆಸ್ತಿಯ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಮೇಲೆ ದಾವೆ ದಾಖಲು ಮಾಡಿದ್ದೀರಿ ಎಂದರೆ ಸಾಕ್ಷಿಯು ಬೇರೆ ಆಸ್ತಿಯಲ್ಲಿ ಭಾಗ ಬಂದಿದ್ದು ಇದರಲ್ಲಿ ನನಗೆ ಭಾಗ ಬರುವ ಉದ್ದೇಶದಿಂದ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ನಂತರ ದಾವಾ ಆಸ್ತಿಯ ಸ್ವಾಧೀನವನ್ನ 7 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆಂದರೆ ಸಾಕ್ಷಿಯು ನನ್ನ ಭಾಗದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಭಾಗ ಇಲ್ಲ ಎಂದರೆ ಸರಿಯಲ್ಲ. ಮಾರಾಟವಾದ 4-5 ವರ್ಷಗಳ ನಂತರ ಮಾರಾಟದ ವಿಚಾರ ನನಗೆ ಗೊತ್ತಾಗಿರುತ್ತದೆ. ಎಲ್ಲಾ ವಿಚಾರಗಳೂ ಗೊತ್ತಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ